## ಕಳೆದ ಸಂಚಿಕೆಯಲ್ಲಿ



ರೈತರ ಸಂತೆಯಲ್ಲಿ ರವಿಯನ್ನು ತನ್ನ ವಶಕ್ಕೆ ತೆಗೆದುಕೊಂಡ ಮಾಯಣ್ಣನಿಗೆ, ರವಿ ಮತ್ತು ಸಂಗಡಿಗರ ಗಾಂಜಾ ದಂಧೆಯ ವಿಷಯ ತಿಳಿಯಿತು. ಕುಂಬಳಕಾಯಿಗಳಲ್ಲಿ ಗಾಂಜಾ ತುಂಬಿ ರವಿ ವ್ಯವಹಾರ ನಡೆಸುತ್ತಿದ್ದ. ಗಾಂಜಾ ದಂಧೆಯ ವಿಷಯ ಅಮ್ಮುವಿಗೆ ತಿಳಿದು, ಆ ಸಂಬಂಧ ನಡೆದಿರುವ ಮಾತುಕತೆಯಿಂದಾಗಿ ಅವಳ ಕೊಲೆ ನಡೆದಿರುವ ಸಾಧ್ಯತೆ ಮಾಯಣ್ಣನಿಗೆ ಹೊಳೆಯಿತು. ಅಮೃತಾಳ ಕೊಲೆಯಾದಾಗಿನಿಂದ ನಾಪತ್ತೆಯಾಗಿದ್ದ ಜಯಂತ್ ಒಮ್ಮಿಂದೊಮ್ಮೆಗೆ ಪ್ರತ್ಯಕ್ಷನಾಗಿದ್ದ. ಅವನೊಂದಿಗಿನ ಮಾತುಕತೆಯಲ್ಲಿ ಹೆಚ್ಚಿನ ವಿಷಯ ತಿಳಿಯಲಿಲ್ಲ. ಅಮೃತಾಳ ನಡವಳಿಕೆಯ ಬಗ್ಗೆ ಬೇಸರವಿತ್ತೇ ಹೊರತು ಅವಳನ್ನು ಕೊಲ್ಲುವಷ್ಟು ದುಷ್ಟತನ ತನ್ನಲ್ಲಿಲ್ಲ ಎಂದು ಜಯಂತ್ ವಾದಿಸಿದ. ಅವನನ್ನೂ ಠಾಣೆಗೆ ಕರೆತರಲಾಯಿತು. ಮಾಯಣ್ಣನ ಸಿಬ್ಬಂದಿ, ರವಿಯ ಗಾಂಜಾ ದಂಧೆಗೆ ಸಂಬಂಧಿಸಿದ ವ್ಯಾಪಾರಿಗಳನ್ನು ಬಂಧಿಸಿ, ಮಾಲನ್ನು ಜಪ್ತಿ ಮಾಡಿದರು. ಪೊಲೀಸ್ ಠಾಣೆಯಲ್ಲಿ ರವಿ, ಅಮೃತಾಳೊಂದಿಗೆ ತನಗೆ ಮದುವೆಯಾಗಿರುವುದಾಗಿ ಹೇಳಿದ. ಅವಳು ಬರೆದಿರಬಹುದಾದ ಉಯಿಲಿನ ಬಗ್ಗೆ ತನಗೆ ಯಾವ ವಿಷಯವೂ ತಿಳಿದಿಲ್ಲ ಎಂದ. ತನಿಖೆಯ ತಿರುವುಗಳ ಬಗ್ಗೆ ಯೋಚಿಸುತ್ತಿದ್ದ ಮಾಯಣ್ಣನನ್ನು ಜಾಹ್ನವಿಯ ಫೋನ್ ಕರೆ ಆಹ್ವಾನಿಸಿತು.

'ನಿಮ್ಮೊಬ್ಬುರ್ಗೆ ಅಲ್ಲ. ಅಲ್ಲದೆ ಇಲಾಖೆಯವರಿಗೆ ಹೇಗೆ ತಿಳೀಬೇಕು ಅವರ ಅಧಿಕಾರಿಗಳು ಎಂತೆಂಥ ಕಠಿಣ ಪರಿಸ್ಥಿತಿಯಲ್ಲಿ ಕೆಲಸ ಮಾಡಬೇಕು ಅಂತ. ಎನಿವೇ ಥ್ಯಾಂಕ್ ಯು ಫಾರ್ ದಿ ಲೀಡ್ಸ್'.

ಜಾಹ್ನವಿಯ ಉತ್ತರಕ್ಕೂ ಕಾಯದೆ ಮಾಯಣ್ಣ ಎದ್ದು ಸರಸರನೇ ಮೆಟ್ಟಿಲಿಳಿದು, ಕೆಟ್ಟೆನೊ ಬಿಟ್ಟೆನೊ ಎಂದು ಓಡಿ ಕೆಳಗಿಳಿದಿದ್ದ.

ಮಾಯಣ್ಣ ಮತ್ತೆ ಠಾಣೆಗೆ ಬಂದು ತನ್ನ ಕುರ್ಚಿಯಲ್ಲಿ ಕುಳಿತು, ನಡೆದ ಘಟನೆಗಳ ವಿಶ್ಲೇಷಣೆಗೆ ಇಳಿದಿದ್ದ.

ಒಂದು– ಜಾಹ್ನವಿ, ತನ್ನನ್ನು ಅವಳ ಮಾಯಾಜಾಲದಲ್ಲಿ ಕೆಡವಿ, ತನಿಖೆ ತನ್ನೆಡೆಗೆ ತಿರುಗದಂತೆ ದಾರಿ ತಪ್ಪಿಸುತ್ತಿದ್ದಾಳಾ ಎನ್ನುವುದು. ಈ ಕೊಲೆ ಪ್ರಕರಣದಲ್ಲಿ ಜಾಹ್ನವಿ ಮುಖ್ಯ ಶಂಕಿತಳಲ್ಲದಿರಬಹುದು, ಆದರೆ ಅವಳೂ ಅಮ್ಮುವಿನ ಬಗ್ಗೆ ಕೋಪ ದ್ವೇಷಗಳ ಹೊರೆ ಹೊತ್ತಿದ್ದವಳು. ಅಲ್ಲದೆ ಅತಿ ಸುಲಭವಾಗಿ ಹೊತ್ತಿ ಉರಿಯುವಂಥವಳು.

ಎರಡು– ಜಾಹ್ನವಿ ತನಗೆ ದಿನೇಶನ ಬಗ್ಗೆ ಇರುವ ದ್ವೇಷ ಸೇಡುಗಳ ಶಮನಕ್ಕಾಗಿ ಈ ಕೊಲೆ ತನಿಖೆ ಅವನ ಕಡೆಗೆ ತಿರುಗುವಂತೆ ತನ್ನನ್ನು ಉಪಯೋಗಿಸಿಕೊಳ್ಳುತ್ತಿದ್ದಾಳಾ?

ಮೂರು– ಕೊಲೆ ಅಪರಾಧಿಯು ಅಮ್ಮು ಮನೆಯ ಹಿಂದಿನಿಂದಲೂ ಒಳಬಂದಿರುವ ಸಾಧ್ಯತೆಯಿದೆ ಎನ್ನುವುದು.

ನಾಲ್ಕು– ದಿನೇಶನಿಗೆ ಮೊದಲಿನಿಂದಲೂ ಅಮ್ಮುವಿನ ಬಗ್ಗೆ ವಿಶೇಷ ಮತ್ತು ದೂರಗಾಮಿ ಆಸಕ್ತಿಗಳಿತ್ತು ಎನ್ನುವುದು.

ಅಷ್ಟರಲ್ಲಿ ಪೀಸಿ ಸಿದ್ಧರಾಜು ಬಂದು–

'ಸಾರ್... ಡೈರೆಕ್ಟರ್ ದಿನೇಶ ಅವರನ್ನ ಕರ್ಕೊಂಡ್ ಬಂದು, ಹೊರಗೆ ಕೂರ್ಸಿದ್ದೀನಿ'.

'ಒಳಗಡೆ ಕಳಿಸಿ ಅವರನ್ನ ಸಿದ್ಧರಾಜು'.

ಹಳೆ ಕಾಲದ ನಾಟಕದ ಭಾಗವತರು ಉದ್ದಕ್ಕೆ ಬಿಟ್ಟಂತಹ, ಬಾಚದೆ ಸುಮ್ಮನೆ ಹಾಗೆ ಹಿಂದಕ್ಕೆ ತೀಡಿದ, ಅಲ್ಲಲ್ಲಿ ನರೆತ ಪೊದೆ ಕೂದಲ ತಲೆ, ಕನ್ನಡಕದ ಕಡ್ಡಿಗಳಿಗೆ ಕಟ್ಟಿದ ಕಪ್ಪು ದಾರದ ಸರವನ್ನು ಕತ್ತಿಗೆ ನೇತಾಕಿಕೊಂಡಿದ್ದ, ಮೂವತ್ತು ಮೂವತ್ತೈದರ ನಡುವಿನ ದಿನೇಶ ಗುಂಪಿನಲ್ಲಿ ಗುರುತು ಹಿಡಿಯಲಾಗದ ಸಾಧಾರಣ ಎತ್ತರದ, ಸಾಧಾರಣ ಮನುಷ್ಯ.

ದಿನೇಶ ಸಮಜಾಯಿಷಿ ಕೊಡುವಂತೆ,

'ಬಾಗಿಲಲ್ಲಿ ನಿಂತಿದ್ದೆ, ಜೋರಾಗಿ ಗಾಳಿ ಬೀಸಿ ಇದ್ದಕ್ಕಿದ್ದಂತೆ ಬಾಗಿಲು ಮುಚ್ಚಿಕೊಂಡು, ಸಂದಿನಲ್ಲಿದ್ದ ಕೈಬೆರಳುಗಳು ಜಜ್ಜಿ, ಫ್ರ್ಯಾಕ್ಚರ್ ಆಗೋಯ್ತು... ಇನ್ನು ಮಿಕ್ಕಿದ್ದು, ನನಗೆ ಯಾವ ಕೆಟ್ಟ ಉದ್ದೇಶಗಳೂ ಇರಲಿಲ್ಲ... ಜಯಂತ್ ಹೈಪರ್ ಸೆನ್ಸಿಟಿವ್ ಮನುಷ್ಯ, ಅವನೇನೊ ಕಲ್ಪನೆ ಮಾಡ್ಕೊಂಡು, ಅಮ್ಮು ಅವರಿಂದ ಬೇರೆ ಆದರೆ ಅದು ನನ್ನ ತಪ್ಪಲ್ಲ ಅಲ್ವ ಸರ್'.

'ವೈಯಕ್ತಿಕ ವಿಷಯಗಳಲ್ಲಿ ನಮಗೆ ಆಸಕ್ತಿ ಇಲ್ಲ... ನಿನ್ನನ್ನ ಅಂದಾಜು ಮಾಡ್ತಿದ್ದಿವಿ ಅಷ್ಟೇ... ಸರಿ ನಿನ್ನ ಬೆರಳಿಗೆ ಏನು ಚಿಕಿತ್ಸೆ ಮಾಡುಸ್ದೆ?'

'ಕೊಳದ ರಸ್ತೆ ಹತ್ತಿರ ಇರೋ ಆರ್ಥೋಪಿಡಿಕ್ ಡಾಕ್ಟರ್ ವಿಶ್ವನಾಥ ಹತ್ತಿರ ಟ್ರೀಟ್‌ಮೆಂಟ್ ತಗೊಂಡೆ ಸರ್'.

'ವಿಶ್ವನಾಥ್ ಶಾಲೇಲಿ ನನ್ನ ಸಹಪಾಠಿ ಗೊತ್ತಾ?'.

ಡಾಕ್ಟರ್ ವಿಶ್ವನಾಥ್‌ಗೆ ಮಾಯಣ್ಣ ಫೋನ್ ಮಾಡಿ, ಸ್ಪೀಕರ್ ಆನ್ ಮಾಡಿ,

'ವಿಶ್ವ... ನಾನು ಮಾಯಣ್ಣ'.

'ಹೇಯ್ ಹೇಗಿದ್ದೀಯಾ?'

'ಚೆನ್ನಾಗಿದ್ದೀನಿ, ಒಂದು ಮಾಹಿತಿ ಬೇಕಾಗಿತ್ತು?'

'ಹೇಳು ಮಾಯಣ್ಣ'.

'ಈ ನಡುವೆ ಟೀವಿ ಸೀರಿಯಲ್ ಡೈರೆಕ್ಟರ್ ದಿನೇಶ ನಿನ್ನತ್ರ ಏನಾದ್ರು ಟ್ರೀಟ್‌ಮೆಂಟ್‌ಗೆ ಅಂತ ಬಂದಿದ್ರಾ?'

'ಆತ ನನಗೆ ಗೊತ್ತು, ವರ್ಷ ಆಯ್ತೇನೋ ಆತನ್ನ ನೋಡಿ... ಆಮೇಲೆ?'

'ಸರಿ, ಮತ್ತೆ ಆಮೇಲೆ ಫೋನ್ ಮಾಡ್ತೀನಿ'.

ದಿನೇಶ ತಲೆ ಕೆಳಗೆ ಹಾಕಿದ್ದ.

'ಅಮ್ಮು ಕೊಲೆಯಾದ ದಿನ ಬೆಳಿಗ್ಗೆಯಿಂದ ಎಲ್ಲೆಲ್ಲಿದ್ದೆ ಏನೇನ್ ಮಾಡ್ದೆ ಹೇಳು?'

'ಎಂದಿನಂತೆ ನಾನು ಎದ್ದು ರೆಡಿಯಾಗಿ ಹೊರಗೆ ಬರುವುದು ಬೆಳಿಗ್ಗೆ ಒಂಬತ್ತಕ್ಕೆ... ಆ ನಂತರ ನಮ್ಮ ಬಡಾವಣೆಯಲ್ಲಿಯೇ ಒಂದು ಗಂಟೆ ವಾಕ್ ಮಾಡಿ ಮನೆಗೆ ಬಂದು ಹನ್ನೆರಡು ಗಂಟೆಗೆ ನನ್ನ ಕೆಲಸಕ್ಕೆ ಹೋಗುತ್ತೇನೆ'.

'ಆ ದಿನ ಆ ಸಮಯದಲ್ಲಿ ಯಾರನ್ನಾದರೂ ಮೀಟ್ ಮಾಡಿದ್ಯಾ ಅಥವಾ ನೋಡಿದ್ಯಾ?'

'ಇಲ್ಲ'.

'ಅಮ್ಮು ಅವರು ಊರಲ್ಲಿ... ಜೋರಾಗಿದ್ದಾರ ಹೇಗೆ?'

'ಅವರ ಪರ್ಸನಲ್ ಮ್ಯಾಟರ್ಸ್ ಏನೂ ಗೊತ್ತಿಲ್ಲ ಸರ್'.

'ಮತ್ತೆ ಸುಳ್ಳು'.

'ಸೀರಿಯಲ್‌ಗೆ ಲೊಕೇಶನ್ ನೋಡಬೇಕು ಅಂತ ಅವರ ಎಸ್ಟೇಟಿಗೆ ಎರಡು ಸಾರಿ ಹೋಗಿ ಬಂದಿದ್ದೀಯ... ಎಸ್ಟೇಟ್ ಮ್ಯಾನೇಜರ್ ಚಂದ್ರನ್ ಹತ್ತಿರ, ಅಮ್ಮು ಅವರ ಆಸ್ತಿಪಾಸ್ತಿಯ ಬಗ್ಗೆ ಕಂಪ್ಲೀಟ್ ಡಿಟೇಲ್ಸ್ ಕೇಳಿ ತಿಳ್ಕೊಂಡಿದ್ದೀಯಾ... ಚಂದ್ರನ್‌ಗೆ ಈಗಲೇ ಫೋನ್ ಮಾಡ್ಲಾ...?'

ದಿನೇಶ ಮತ್ತೆ ತಲೆ ಕೆಳಗೆ ಮಾಡಿದ್ದ.

'ಅಂದರೆ ಅಮ್ಮು ಅವರ ಆಸ್ತಿಯ ಮೇಲೆ ಕಣ್ಣಾಕಿ, ಅವರನ್ನ ಕುತಂತ್ರದಲ್ಲಿ ಜಯಂತನಿಂದ ಬೇರೆ ಮಾಡಿ, ನೀನು ಅಲ್ಲಿ ಬೇರು ಬಿಡಬೇಕು ಅಂತ ಪ್ಲಾನ್ ಮಾಡ್ದೆ... ಮೊದಲನೇ ಭಾಗ ಸಾಕಷ್ಟು ಯಶಸ್ವಾಯ್ತು, ಆದರೆ ಎರಡನೇ ಭಾಗ ನಡಿಲಿಲ್ಲ... ಹೌದಾ?'

'ಅದು ನಿಜ ಆಗಿದ್ರೆ, ನಾನ್ಯಾಕೆ ಅಮ್ಮುನ ಕೊಲೆ ಮಾಡಬೇಕು ಸಾರ್?'

'ನಾನೆಲ್ಲಿ ಹೇಳ್ದೆ... ನೀನು ಕೊಲೆ ಮಾಡಿದ್ದೀಯಾ ಅಂತ. ಅಂತೂ ನಿನ್ನ ಬಾಯಲ್ಲೇ ಬಂತಲ್ಲ ಅದು'.

'ಸ್ವಲ್ಪ ತಾಳು, ಅಲ್ಲಿಗೂ ಬರ್ತೀನಿ'.

'ಅಮ್ಮು ಜೊತೆ ನೀನು ಅನುಚಿತ ವರ್ತನೆ ಮಾಡಿ, ಅಂದರೆ ಲೈಂಗಿಕ ಕಿರುಕುಳ ಕೊಟ್ಟಿದ್ದು ನಿಜಾನಾ?'

'ಸತ್ಯವಾಗಿಯೂ ಇಲ್ಲ ಸಾರ್'.

'ಅಮ್ಮು ಕೆನ್ನೆ ಮೇಲೆ ಬಾರಿಸಿದ ಹಸ್ತಮುದ್ರೆ ಇನ್ನೂ ಹಾಗೇ ಇದ್ದಂಗಿದೆ'.

'...'

'ಅಮ್ಮು ತಾನು ಕೊಲೆಯಾದ ಹಿಂದಿನ ದಿನದಂದು, ಪ್ರೆಸ್‌ಮೀಟ್ ಕರೆದು ಇದರ ಬಗ್ಗೆ ನಿನ್ನನ್ನ ಸಾರ್ವಜನಿಕವಾಗಿ ಬೆತ್ತಲು ಮಾಡಿ, ಪೊಲೀಸ್ ಕಂಪ್ಲೇಂಟ್ ಕೊಡ್ತೀನಿ ಅಂತ ಬೆದರಿಕೆ ಹಾಕಿದ್ದು ನಿಜಾನಾ?'

'ಅಂಥದ್ದೇನೂ ಇಲ್ಲ ಸಾರ್'.

'ಮತ್ತೆ ಸುಳ್ಳು... ಅಮ್ಮು ಇದನ್ನ ನಿನಗೆ